BKN-01

Sl.No. : **Total No. of Pages : 3**

ಪ್ರಥಮ ವರ್ಷದ ಬಿ.ಎ./ಬಿ.ಕಾಂ. ಪದವಿ ಪರೀಕ್ಷೆ, ಮೇ/ಜೂನ್ - 2026

(SLM Scheme)

ಕನ್ನಡ ಭಾಷೆ (ಪತ್ರಿಕೆ–೧)

ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು

(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು, ಪ್ರಬಂಧ ಮತ್ತು ಆಡಳಿತ ಕನ್ನಡ)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳು ಕಡ್ಡಾಯ.*

ವಿಭಾಗ–ಎ

(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು) (20 ಅಂಕಗಳು)

ಪ್ರ1) ಎರಡರ ಭಾವವನ್ನು ಸಂದರ್ಭ ಸಹಿತ ವಿವರಿಸಿ. **[2×4=8]**

೧) ಸಂಸಾರ ಸಾಗರದಾಗ, ಲೆಕ್ಕವಿರದಷ್ಟು ದುಃಖದ ಬಂಡಿ
ನಾ ಬಲ್ಲೆ ನನಗೆ ಗೊತ್ತಿಲ್ಲದಿದ್ದರೂ ಎಲ್ಲಿ ಆಚೆಯಾ ದಂಡಿ
ಮಲಗಿರುವ ಕೂಸು ಮಲಗಿರಲಿ ಅಲ್ಲಿ, ಮುಂದಿನದು ದೇವರ ಚಿತ್ತ
ನಾ ತಡೀಲಾರೆ ಅದು, ಯಾಕ ನೋಡತೀ ಮತ್ತ ಮತ್ತ ನೀ ಇತ್ತ?

ಅಥವಾ

ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು
ವದೆಸಿಕೊಂಡು ವರಗಿದೋರು ನನ್ನ ಜನಗಳು
ಕಾಲುಕಯ್ಯಿ ಹಿಡಿಯೋರು ಕೈ ಮಡಗಿಸಿಕೊಳ್ಳೋರು
ಭಕ್ತರಪ್ಪ ಭಕ್ತರೋ ನನ್ನ ಜನಗಳು

೨) "ನೀವು ಹ್ಞೂಂ ಅಂದರೆ ಸಾಕು ಸಾವಿರ ಹೆಣ್ಣು ಹಾರಾಡ್ತಾ ಬರತಾವೆ.
ಯಾಕಂತೀನಿ? ಈ ಮಾತಂದ್ರೆ–ನೀವು ಮನೆ ಮಾಡವ್ರಿದ್ದೀರಿ, ಮನೆಗೆ
ಲಕ್ಷಣಾ ಮಡದಿ ಅಲ್ಲವೆ ಶೆಟ್ರೇ? ಮಡದಿಯಿಲ್ಲದ ಮನೆ ಮಸಣದಂತೇ ನೋಡಿ"

ಅಥವಾ

ಬಯಕೀ ಬುತ್ತಿ ಯಾವಾಗ ತರಲಿ
ಯಾವಾಗ ತರಲಿ ಅನಕಂತ
ಮಣ್ಣ ಆದ್ಲು ನಮ್ಮವ್ವ,
ಗಿಡಾ ಹುಟ್ಟಿಸಿ ಗಿಡಾ ಸತ್ಯು
ಹೊಳೀ ತುಂಬಿಸಿ ಹಳ್ಳ ಬತ್ಯು
ನನಗ ಬಯಕಿ ಹತ್ತಲಿಲ್ಲ
ನಿನಗ ಹತ್ತಿದವ?

ಪ್ರ2) ಎಂಟು ಪದಗಳಿಗೆ ಅರ್ಥ ಬರೆಯಿರಿ. **[8×½=4]**

ಬಗ್ಗ, ಹೊನಲು, ತಿಮಿರ, ಪಹರೆ, ಹಾರುವ, ಖೋಲಿ

ಕಂದೀಲು, ಪಾವಟಿಗೆ, ಪಗಾರ, ಹಂದರ, ಬಡಿಗೆ, ಬೆರಕಿ

ಪ್ರ3) ಯಾವ ಪಠ್ಯವನ್ನು ಬಿಡದೆ ನಾಲ್ಕಕ್ಕೆ ಸಂದರ್ಭ ಸ್ವಾರಸ್ಯ ಬರೆಯಿರಿ. **[4×2=8]**

೧) ಸವಿದು ಮೆದ್ದರೊ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು

೨) ಎಲ್ಲವನ್ನೆತ್ತೆತ್ತಿ ಕುತ್ತಿ ತೀರದ ಬಯಕೆ ಮೊಳೆವ ಕೊಂಬಿಗೆ

೩) ಹಿಟ್ಟು ತಿರುವಿ ಮಕ್ಕನ್ ಮಲಗ್ಸಿ ಹರಿದಿದ್ ಸೀರೆ ಗಂಟು ಬಿಕ್ಕಂಡ್ ತಾಲೀಮಿಗೆ ಬಂದದ್ದೇ ಕನಸಾಗ್ಹೋಯ್ತು

೪) ಅಜ್ಜ ಯಮುನಾಬಾಯಿಯ ಕೈಯಿಂದ ನೀರು ಕುಡಿಯುವೆಯಾ?

೫) ಬೆಳವಣಿಗೆ ದೇಹದ್ದಿರಬಹುದು, ಬುದ್ಧೀದಿರಬಹುದು

೬) ನಾನಿಲ್ಲೇ ಕೂಡೋದು, ನಾನಿಲ್ಲೇ ನಿಂದ್ರೋದು

ವಿಭಾಗ–ಬಿ

(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು) (30 ಅಂಕಗಳು)

ಪ್ರ4) ಎರಡು ಪ್ರಶ್ನೆಗಳಿಗೆ ಉತ್ತರಿಸಿ. **[2×10=20]**

೧) ಅನಾಥೆಯ ಬದುಕಿನ ಗೋಳಿನ ದುರಂತ ಚಿತ್ರಣ 'ದುಃಖಸೇತು' ಕವಿತೆಯಲ್ಲಿ ಹೇಗೆ ಅಭಿವ್ಯಕ್ತವಾಗಿದೆ? ವಿವರಿಸಿ.

ಅಥವಾ

ತನ್ನ ಸಮಕಾಲೀನ ಭಾರತದ ಚಿತ್ರಣವನ್ನು 'ಪುರುಷ ಸೂಕ್ತ" ಕವಿತೆ ಹೇಗೆ ಕಟ್ಟಿಕೊಡುತ್ತದೆ? ವಿವರಿಸಿ.

೨) ವೇಣಕ್ಕ "ಬಹಿರಂಗದಲ್ಲಿ ಸನಾತನವಾದಿಯಾಗಿದ್ದು ಅಂತರಂಗದಲ್ಲಿ ಮಾನವತಾವಾದಿಯಾಗಿದ್ದಾಳೆ" ಹೇಗೆ? ವಿಚಾರ ಮಾಡಿ.

ಅಥವಾ

'ತೆರೆಗಳು' ನಾಟಕದಲ್ಲಿ ಕಿಟ್ಟಿ ಪಾತ್ರದ ವೈಶಿಷ್ಟ್ಯ ಮತ್ತು ಮಹತ್ವವನ್ನು ವಿವರಿಸಿ.

ಪ್ರ5) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **[2×5=10]**

೧) 'ಕಣಿವೆಯ ಮುದುಕ' ಕವನದ ವಸ್ತು ಮತ್ತು ಆಶಯ

ಅಥವಾ

'ರಾಣಿ ತಿಮ್ಮಿಯ ಸಿಂಹಾಸನ' ಕವನದ ತಿಮ್ಮಿ

೨) ಶ್ರೀರಂಗರ ಬದುಕು–ಬರೆಹ

ಅಥವಾ

'ಮನೆ' ನಾಟಕದ ಪರಮೇಶ್ವರಪ್ಪನ ಪಾತ್ರ

ವಿಭಾಗ–ಸಿ

(ಪ್ರಬಂಧ ಮತ್ತು ಆಡಳಿತ ಕನ್ನಡ) (30 ಅಂಕಗಳು)

ಪ್ರ6) ಎರಡು ಪ್ರಶ್ನೆಗಳಿಗೆ ಉತ್ತರಿಸಿ. **[2×10=20]**

೧) 'ನಮ್ಮಂತೆಯೇ ಅಮೆರಿಕನ್ನರು; ಅಮೆರಿಕನ್ನರಂತೆ ನಾವು' ಎಂಬ ಲೇಖಕರ ಅಭಿಪ್ರಾಯ 'ನನ್ನ ಟೋಪಿ' ಪ್ರಬಂಧದಲ್ಲಿ ಹೇಗೆ ಬಿಂಬಿತವಾಗಿದೆ? ವಿವರಿಸಿ.

ಅಥವಾ

'ರುಚಿ' ಪ್ರಬಂಧದ ವಸ್ತು ಮತ್ತು ಆಶಯವನ್ನು ಚರ್ಚಿಸಿ.

೨) ಆಡಳಿತ ಕನ್ನಡದ ಸ್ವರೂಪ, ಲಕ್ಷಣಗಳು ಹಾಗೂ ಪಾರಿಭಾಷಿಕತೆಯನ್ನು ಕುರಿತು ಬರೆಯಿರಿ.

ಅಥವಾ

ಜ್ಞಾಪನ ಪತ್ರ ಎಂದರೇನು? ಜ್ಞಾಪನ ಪತ್ರದ ಸ್ವರೂಪ, ಲಕ್ಷಣ ಹಾಗೂ ರೂಪರೇಷೆಗಳನ್ನು ಮಾದರಿ ಜ್ಞಾಪನ ಪತ್ರದೊಂದಿಗೆ ವಿವರಿಸಿ.

ಪ್ರ7) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **[2×5=10]**

೧) ದಿವಾನಖಾನೆಯ ಅಂದಚೆಂದ

ಅಥವಾ

'ಸುಲಭದಲ್ಲಿ ಸಜ್ಜನರಾಗಲಾರಿರಿ' ಪ್ರಬಂಧದ ಆಶಯ

೨) ಸರ್ಕಾರಿ ಪತ್ರದ ವಿವಿಧ ಅಂಗಗಳು

ಅಥವಾ

ಕನ್ನಡ ಮತ್ತು ಇ–ಅಂಚೆ